ರಾಜ್ಯಗಳೊಡನೆ ಚರ್ಚಿಸಲಾಗುತ್ತಿದ್ದು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಬೆಂಗಳೂರು – ಮೈಸೂರು ರಸ್ತೆಯನ್ನು ಜೋಡಿ ರಸ್ತೆಯ ಪರಿವರ್ತನೆ

80 (946) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು–ಮೈಸೂರು ಜೋಡಿ ರಸ್ತೆ ಮಾಡಲು ಸರ್ಕಾರದವರು ನಿರ್ಧರಿಸುವರೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಇಲ್ಲ

ಬೈಲಹೊಂಗಲ ತಾಲ್ಲೂಕಿನಲ್ಲಿ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಶಿಫಾರಸ್ಸು

119 (652) ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿಧಾನಸಭೆಯ ಅಂದಾಜು ಸಮಿತಿಯವರು ಸೂಚಿಸಿದ 9ನೇ ವಿಧಾನಸಭೆಯ 4ನೇ ವರದಿಯಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇವಲಾಪೂರ, ಸಂಗೊಳ್ಳಿ, ಅನಿಗೋಳ, ಹಾಗೂ ಸವದತ್ತಿ ತಾಲ್ಲೂಕಿನ ಮೊಟ್ಟೆಬ್ಬಿಳಿ, ಏಣಗಿ ಗ್ರಾಮಗಳಲ್ಲಿ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಅಥವಾ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಆ) ಈ ಯೋಜನೆಗಳನ್ನು ಅಂದಾಜು ಸಮಿತಿಯವರು 3 ತಿಂಗಳೊಳಗಾಗಿ ಕೈಕೊಳ್ಳಬೇಕೆಂದು ಹಾಗೂ ಅದಕ್ಕೆ ಬೇಕಾಗುವ ಹಣವನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಇ) ಅಂದಾಜು ಸಮಿತಿಯವರು ಸೂಚಿಸಿದ ಪ್ರಕಾರ ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ತೆಗೆದುಕೊಳ್ಳಬೇಕೆಂದು ಹಾಗೂ ಇದಕ್ಕೆ ಹಣ ಒದಗಿಸಲು ಮುಖ್ಯ ಇಂಜಿನೀಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರಿಗೆ ಸೂಚಿಸಿರುವರೆ;

ಈ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಇನ್ನೂವರೆಗೂ ಕೆಲಸ ಪ್ರಾರಂಭವಾಗದೇ ಇದ್ದದ್ದರಿಂದ ಸರಕಾರದವರು ಈ ಕೆಲಸಗಳನ್ನು ಬೇಗನೆ ಪ್ರಾರಂಭಿಸಲು ಯಾವ ಕ್ರಮ ಕೈಕೊಂಡಿರುವರು;

ಉ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಯೋಜನೆಗಳನ್ನು ಪ್ರಾರಂಭಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ;

ಊ) ಈ ಪ್ರತಿಯೊಂದೂ ಏತ ನೀರಾವರಿ ಯೋಜನೆಗೆ ಎಷ್ಟು ಹಣ ಬೇಕಾಗುವುದು ಹಾಗೂ ಎಷ್ಟು ಎಕರೆ ನೀರಾವರಿ ಆಗುವುದು (ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಎಷ್ಟು ಗ್ರಾಮಗಳಿಗೆ ಎಷ್ಟು ಎಷ್ಟು ಎಕರೆ ನೀರಾವರಿ ಆಗುವುದು ಎಲ್ಲಿ ಸಂಪೂರ್ಣ ವಿವರ ಒದಗಿಸುವುದು) ?